KACM010005402019

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

**ಸತ್ರ ಮೊಕದ್ದಮೆ ನಂಃ 35/2019 and 143/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಸಂತೋಷ್ | ಪಿಡಬ್ಲೂ - 2 |
| ತಂದೆಯ ಹೆಸರು | - | ಬಸಪ್ಪ ಬಿ.ಎಸ್. | ಸಿಡಬ್ಲೂ - 2 |
| ವಯಸ್ಸು | - | 31 ವರ್ಷ | |
| ಉದ್ಯೋಗ | - | ಗ್ರಾಮಪಂಚಾಯಿತಿಯಲ್ಲಿ ಪೌರ ಕಾರ್ಮಿಕ, ಬುಕ್ಕಾಂಬೂದಿ | |
| ವಾಸ ಸ್ಥಳ | - | ಬುಕ್ಕಾಂಬೂದಿ | |

ದಿನಾಂಕಃ 15-11-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

(ದಿನಾಂಕಃ 20-07-2021 ರಂದು ಆದ ಆದೇಶದ ಅನ್ವಯ ಎಸ್ ಸಿ ನಂಃ 143/2019 ಇದು ಪ್ರಸ್ತುತ ಪ್ರಕರಣದ Split-up ಪ್ರಕರಣವಾಗಿರುವುದರಿಂದ ಸದರಿ ಪ್ರಕರಣವನ್ನು ಈ ಪ್ರಕರಣದೊಂದಿಗೆ ಸಾಕ್ಷ್ಯದಾಖಲಿಸುವ ನಿಮಿತ್ತ Club ಮಾಡಲಾಗಿರುತ್ತದೆ).

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನಾನು ಕಳೆದ 6 ವರ್ಷಗಳಿಂದ ಬುಕ್ಕಾಂಬೂದಿ ಗ್ರಾಮ ಪಂಚಾಯಿತಿಯಲ್ಲಿ ಪೌರ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದೇನೆ.
2. ಫ್ರಾಸಾ.1 ರಶ್ಮಿ ಇವರು ಗೊತ್ತು. ಅವರು ನಮ್ಮ

ಗ್ರಾಮಪಂಚಾಯಿತಿಯಲ್ಲಿ ಕಾರ್ಯದರ್ಶಿ ಎಂದು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನನಗೆ ಚಾಸಾ.3 ಓಂಕಾರಪ್ಪ ಗೊತ್ತು, ಅವರು ನಮ್ಮ ಪಂಚಾಯಿತಿಯಲ್ಲಿ ವಾಟರ್ ಮ್ಯಾನ್ ಎಂದು ಕೆಲಸ ಮಾಡುತ್ತಾರೆ. ಸುಮಾರು 2 ವರೆ ವರ್ಷಗಳ ಹಿಂದೆ ಒಂದು ದಿನ ನಾನು ಮತ್ತು ಓಂಕಾರಪ್ಪ, ಫ್ರಾಸಾ.1 ರಶ್ಮೀ ಮೇಡಮ್ ರವರ ಜೊತೆ ಬುಕ್ಕಾಂಬೂದಿಯ ಬುಕ್ಕರಾಯನ ಕೆರೆಗೆ ಬೆಳಿಗ್ಗೆ 10.30 ಗಂಟೆ ಸಮಯಕ್ಕೆ ಹೋಗಿದ್ದೆವು. ನಾವು ಕೆರೆಯ ಹತ್ತಿರ ಹೋದಾಗ ಕೆರೆಯ ದಡದಲ್ಲಿ ಒಂದ ತಲೆ ಇಲ್ಲದ ಶವ ಬಿದ್ದಿತ್ತು. ಸದರಿ ಶವವು ಗಂಡಸಿನ ಶವವಾಗಿತ್ತು. ಸದರಿ ಶವವನ್ನು ಎಲ್ಲಿ ಸಿಕ್ಕಿರುತ್ತದೆ ಗೊತ್ತಿಲ್ಲ. ಆದರೆ ಆ ದಿನ ನಾನು ನೋಡಿದ ಶವ ತಲೆ ಇಲ್ಲದ ಶವ ಆಗಿತ್ತು. ಅದು ಈಗ ನಿ.ಪಿ.3 ಮತ್ತು 5 ಫೋಟೋಗಳಲ್ಲಿ ಕಂಡು ಬರುವ ಶವ ಆಗಿರುತ್ತದೆ. ಸದರಿ ಶವವನ್ನು ಯಾರು ಮತ್ತು ಎಲ್ಲಿಂದ ತೆಗೆದಿರುತ್ತಾರೆ ನನಗೆ ಗೊತ್ತಿಲ್ಲ. ಸದರಿ ಶವವು ಯಾವುದರಲ್ಲಿ ಇತ್ತು ಮತ್ತು ಎಲ್ಲಿಂದ ತೆಗೆದಿರುತ್ತಾರೆ ಗೊತ್ತಿಲ್ಲ. ಸದರಿ ಶವವು ಕೆರೆಯ ದಡದಲ್ಲಿ ಇದ್ದ ಬಗ್ಗೆ ಫ್ರಾಸಾ.1 ರಶ್ಮೀ ಇವರಿಗೆ ಯಾರು ತಿಳಿಸಿರುತ್ತಾರೆ ನನಗೆ ಗೊತ್ತಿಲ್ಲ. ನಾನು ಸದರಿ ಕೆರೆಯ ಹತ್ತಿರ ಹೋಗಿದ್ದರ ಕುರಿತಂತೆ ಪೊಲೀಸರು ನನ್ನನ್ನು ಕರೆಸಿ ವಿಚಾರಣೆ ಮಾಡಿರುವುದಿಲ್ಲ ಮತ್ತು ಈ ಕುರಿತಂತೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ

ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ
ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲು ಮಾನ್ಯ ಅಭಿಯೋಜಕರಿಂದಃ-

3. ನಾನು ಮೇಲೆ ಹೇಳಿದಂತೆ ಕೆರೆಯ ಬಳಿ ಹೋದ ದಿಃ 09.11.2018 ಎಂದರೆ ಇರಬಹುದು. ಆ ದಿನ ಮಧ್ಯಾಹ್ನ ಸುಮಾರು 3.45 ಗಂಟೆ ಸಮಯದಲ್ಲಿ ಬುಕ್ಕಾಂಬೂದಿ ಗ್ರಾಮ ಪಂಚಾಯಿತಿ ಕಚೇರಿಯ ಹತ್ತಿರ ನಾವು ಇದ್ದೆವು ಎಂದರೆ ಸರಿ. ನಮ್ಮ ಪಂಚಾಯಿತಿಯ ಸದಸ್ಯರಾದ ನಾಗಬೋಗನಹಳ್ಳಿಯ ಯತೀಶ್ ರವರು ನನಗೆ ಗೊತ್ತು ಎಂದರೆ ಸರಿ. ಸದರಿ ಯತೀಶ್ ರವರು ಪ್ರಾಸಾ.1 ರಶ್ಮಿ ಇವರಿಗೆ ಪೋನ್ ಮಾಡಿ ಬುಕ್ಕರಾಯನ ಕೆರೆಯಲ್ಲಿ ಒಂದು ಚೀಲ ತೇಲುತ್ತಿದೆ ಎಂದು ಮತ್ತು ಸದರಿ ಚೀಲದಲ್ಲಿ ಯಾವುದೋ ಶವ ಇರಬಹುದು ಎಂದು ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಆಗ ಪ್ರಾಸಾ.1 ರಶ್ಮಿ ಇವರು ನನಗೆ ಮತ್ತು ಓಂಕಾರಪ್ಪ ರವರಿಗೆ ಕೆರೆಯಲ್ಲಿ ಶವ ತೆಲುತ್ತಿದೆ ಬನ್ನಿ ಎಂದು ಕರೆದುಕೊಂಡು ಹೋಗಿರುತ್ತಾರೆ. ಆಗ ನಾವು ಕೆರೆಯ ಹತ್ತಿರ ಹೋಗಿ ನೋಡಿದಾಗ ಕೆರೆಯ ನೀರಿನಲ್ಲಿ ಒಂದು ಚೀಲದಲ್ಲಿ ಶವ ಇದ್ದು, ಅದು ಮೇಲೆ ತೇಲುತ್ತಿತ್ತು ಎಂದರೆ ನಾನು ಅದನ್ನು ನೋಡಿರುವುದಿಲ್ಲ. ಸದರಿ ಕೆರೆಯ ಹತ್ತಿರ ಸಾರ್ವಜನಿಕರು ಸೇರಿದ್ದು, ಅವರ ಸಹಾಯದಿಂದ ಕೆರೆಯಲ್ಲಿ ತೇಲುತ್ತಿದ್ದ ಚೀಲವನ್ನು ಮೇಲೆ ತೆಗೆಸಿರುತ್ತಾರೆ ಎಂದರೆ ಸರಿ. ಸದರಿ ಚೀಲದ ಬಾಯಿಯನ್ನು ಕಟ್ಟಲಾಗಿತ್ತು ಎಂದರೆ

ನನಗೆ ಗೊತ್ತಿರುವುದಿಲ್ಲ. ಸದರಿ ಚೀಲವನ್ನು ನಂತರ ತೆರೆದು ನೋಡಲಾಗಿರುತ್ತದೆ ಎಂದರೆ ಸರಿ. ಸದರಿ ಚೀಲದ ಒಳಗೆ ಇನ್ನೊಂದು ಹಳದಿ ಬಣ್ಣದ ಚೀಲವಿದ್ದು ಅದನ್ನು ಸಹ ಬಾಯಿ ಕಟ್ಟಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಹಳದಿ ಚೀಲದ ಬಾಯಿಯನ್ನು ಬಿಚ್ಚಿದಾಗ ಅದರಲ್ಲಿ ನಿ.ಪಿ.3 ಮತ್ತು 5 ಫೋಟೋಗಳಲ್ಲಿ ನೋಡಿದ ಶವ ಇತ್ತು ಎಂದರೆ ಸರಿ. ಸದರಿ ಮೃತ ದೇಹದ ಮೇಲೆ ವಾಣಿ ಮತ್ತು ಐಶ್ವರ್ಯ ಎಂಬ ಹಚ್ಚೆ ಗುರುತು ಇರುವುದು ನಾನು ನೋಡಿರುವುದಿಲ್ಲ. ಅದೇ ರೀತಿ ಮೃತ ದೇಹದಿಂದ ತುಂಬಾ ವಾಸನೆ ಬರುತ್ತಿತ್ತು ಎಂದರೆ ಸಾಕ್ಷಿಯು ನಾನು ಅದನ್ನು ಗಮನಿಸಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಶವವನ್ನು ನೋಡಿದಾಗ ಸಾವರ್ವಜನಿಕರು ಯಾರೋ ದುಷ್ಕರ್ಮಿಗಳು 1-2 ದಿನಗಳ ಹಿಂದೆ ಹರಿತವಾದ ಆಯುಧದಿಂದ ಕುತ್ತಿಗೆಯನ್ನು ಕಡಿದು ರುಂಡ ಮತ್ತು ಮುಂಡವನ್ನು ಬೇರೆ ಮಾಡಿ ಗುರುತು ಸಿಗಬಾರದು ಎಂಬ ಕಾರಣದಿಂದ ಮೃತ ದೇಹವನ್ನು ಚೀಲದಲ್ಲಿ ಹಾಕಿ ಎಸೆದು ಹೋಗಿರುತ್ತಾರೆ ಎಂಬ ಅಭಿಪ್ರಾಯಪಟ್ಟಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲು ಶ್ರೀ ಪಿ.ಇ.ಎಸ್ ವಕೀಲರು – **1** ರಿಂದ **4** ಆರೋಪಿತರ ಪರವಾಗಿ</u>

4. ಪ್ರತಿ ದಿನದಂತೆ ನಾನು ಬೆಳಿಗ್ಗೆ 9.00 ಗಂಟೆಗೆ ನಮ್ಮ ಪಂಚಾಯಿತಿಗೆ ಕೆಲಸಕ್ಕೆಂದು ಹೋಗುತ್ತೇನೆ ಎಂದರೆ ಸರಿ. ನಮ್ಮ ಪಂಚಾಯಿತಿ ಕಚೇರಿಗೆ ಪೊಲೀಸರು ತಲಾಖಾ ವಾಹನದಲ್ಲಿ

ಬೆಳಿಗ್ಗೆ 10.00 ಗಂಟೆಗೆ ಬಂದಿರುತ್ತಾರೆ. ಆ ಸಮಯದಲ್ಲಿ ಪ್ರಾಸಾ.1 ರಶ್ಮಿ ಇವರಿಗೆ ಪೊಲೀಸರು ಒಂದು ಖಾಲಿ ಪೇಪರ್ ನ್ನು ಕೊಟ್ಟು ಅವರು ಹೇಳಿದಂತೆ ದೂರು ಬರೆಯಲು ಹೇಳಿದ್ದು ಅದರಂತೆ ಸದರಿ ರಶ್ಮೀ ಇವರು ಪೊಲೀಸರು ಹೇಳಿದಂತೆ ದೂರು ಬರೆದಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನಾನು ಮತ್ತು ಓಂಕಾರಪ್ಪ ಇದ್ದೆವು ಎಂದರೆ ಸರಿ. ನಾನು ಪ್ರಾಸಾ.1 ರಶ್ಮ ಇವರ ಜೊತೆಯಲ್ಲಿ ಕೆಲಸ ಮಾಡುವ ಕಾರಣ ಅವರ ಬರವಣಿಗೆ ಬಗೆಗ ನನಗೆ ಗೊತ್ತು ಎಂದರೆ ಸರಿ. ನಿ.ಪಿ.1 ದೂರಿನಲ್ಲಿ ಇರುವ ಬರವಣಿಗೆ ಪ್ರಾಸಾ.1 ರಶ್ಮಿ ಇವರದು ಇರತ್ತುದೆ ಮತ್ತು ಸದರಿ ಬರವಣಿಗೆಯನ್ನು ಆ ದಿನ ನಮ್ಮ ಎದುರಿನಲ್ಲಿ ನಮ್ಮ ಪಂಚಾಯಿತಿ ಕಚೇರಿಯಲ್ಲಿ ಬರೆದಿರುತ್ತಾರೆ ಎಂದರೆ ಸರಿ. ನಿ.ಪಿ.1 ದೂರನ್ನು ಬರೆಯುವುದು ನಾನು ಮತ್ತು ಓಂಕಾರಪ್ಪ ಇಬ್ಬರು ನೋಡಿರುತ್ತೇನೆ. ಬೆಳಿಗ್ಗೆ 10.00 ಗಂಟೆಗೆ ನಮ್ಮ ಪಂಚಾಯಿತಿ ಕಚೇರಿಗೆ ಪೊಲೀಸರು ಬಂದಿದ್ದು 10.45 ಗಂಟೆಯ ವರೆಗೆ ನಿ.ಪಿ.1 ನ್ನು ಬರೆದಿರುತ್ತಾರೆ.

5. ನಾನು ಪ್ರಾಸಾ.1 ರಶ್ಮಿ ಇವರ ಜೊತೆ ಬುಕ್ಕರಾಯನ ಕೆರೆಯ ಹತ್ತಿರ ಹೋದಾಗ ಅಲಿಲ ದಡದಲ್ಲಿ ಒಂದು ಶವ ಇತ್ತು ಎಂದರೆ ಸರಿ. ಸದರಿ ಕೆರೆಗೆ ಹೋದಾಗ ಅಲ್ಲಿಯು ಸಹ ಪೊಲೀಸರು ಇದ್ದರು ಎಂದರೆಸ ರಿ. ನಾವು ದಡದಲ್ಲಿ ಇದ್ದ ಚೀಲದ ಒಳಗಡೆ ಇದ್ದ ಶವವನ್ನು ನೋಡಿದ್ದು ಅದಕ್ಕೆ ತಲೆ ಇತ್ತೋ ಇಲ್ಲವೋ ಗಮನಿಸಿರುವುದಿಲ್ಲ, ಆದರೆ ಸದರಿ ಚೀಲದಲ್ಲಿ ಕೆಂಪು ಕೆಂಪು ವಸ್ತು

ಕಾಣುತ್ತಿತ್ತು ಎಂದರೆ ಸರಿ. ಅದನ್ನು ನೋಡಿದ ನಂತರ ನಾವು ಪುನಃ 11.00 ಗಂಟೆಗೆ ನನ್ನ, ಓಂಕಾರಪ್ಪ ಮತ್ತು ರಶ್ಮಿ ಮೇಡಮ್ ರವರನ್ನು ಪೊಲೀಸರು ನಮ್ಮ ಕಚೇರಿಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ಆ ದಿನ ಸಂಜೆ 5.30 ಗಂಟೆಯ ವರೆಗೆ ನಮ್ಮ ಕಚೇರಿಯಲ್ಲಿ ಇದ್ದು ನಾನು ಓಂಕಾರಪ್ಪ ಮತ್ತು ರಶ್ಮಿ ಮೇಡಮ್ ರವರು ನಮ್ಮ ನಮ್ಮ ಮನೆಗೆ ಹೋಗಿರುತ್ತೇವೆ ಎಂದರೆ ಸರಿ.

<u>ಮರು ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ</u>

6. ಮಾನ್ಯ ಅಭಿಯೋಜಕರು ಆರೋಪಿತರ ಪರ ವಕೀಲರ ಪಾಟೀ ಸವಾಲಿನಲ್ಲಿ ಬಂದ ವಿಷಯಕ್ಕೆ ಸಂಬಂದಿಸಿದಂತೆ ಮರು ವಿಚಾರಣೆ ಮಾಡಲು ಅನುಮತಿ ಕೇಳಿದ್ದು ಆದರೆ ಈಗಾಗಲೇ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಿದ್ದು ಆದ್ದರಿಂದ ಮರು ವಿಚಾರಣೆಗೆ ಅವಕಾಶ ಇಲ್ಲವೆಂದು ಅವರ ಕೋರಿಕೆಯನ್ನು ತಿರಸ್ಕರಿಸಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

Sd/-
(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ.